KACN320004822014

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ,ಕೊಳ್ಳೇಗಾಲ**

**ದಿನಾಂಕಃ 30ನೇ ಜನವರಿ 2026**

**ಉಪಸ್ಥಿತರು**

**ಶ್ರೀಮತಿ. ಕಾವ್ಯಶ್ರೀ ಎಂ. ಬಿ.ಎ., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ಕೊಳ್ಳೇಗಾಲ**

**ಅಸಲು ದಾವಾ ಸಂಖ್ಯೆ.48/2014**

**ವಾದಿ** : ನಾರಾಯಣಶೆಟ್ಟಿ ಬಿನ್ ಲೇಟ್ ಭೋಗಶೆಟ್ಟಿ,
ಸುಮಾರು 60 ವರ್ಷ,
ವಾಸಃ ಮಳಿಗೆ ನಂ. 1, ಬಾಂಬೆ ಹೇರ್ ಡ್ರೆಸಸ್,
ಹೊಸ ಬಸ್ ನಿಲ್ದಾಣ ಮಳಿಗೆ,
ಕೊಳ್ಳೇಗಾಲ ಪಟ್ಟಣ,ಚಾಮರಾಜನಗರ ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ.ಎಂ.ಆರ್.ಕೆ., ವಕೀಲರು)**

**ವಿರುದ್ದ/-**

**ಪ್ರತಿವಾದಿ** : ಪೌರಾಯುಕ್ತರು,ನಗರಸಭೆ,
ಕೊಳ್ಳೇಗಾಲ ಪಟ್ಟಣ,
ಚಾಮರಾಜನಗರ ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ.ಎಂ.ಪಿ., ವಕೀಲರು)**

**ಅರ್ಜಿ ಸಂಖ್ಯೆಃ 8/201**

**ಅರ್ಜಿದಾರರು** : ನಾರಯಣಶೆಟ್ಟಿ
....... ವಾದಿ

**ವಿರುದ್ಧ**

**ಎದುರುದಾರರು** : ಆಯುಕ್ತರು
........ ಪ್ರತಿವಾದಿ

| | | |
|---|---|---|
| *i* | ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ **151** |
| *ii* | ಅರ್ಜಿಯಲ್ಲಿ ಕೋರಿರುವ ಪರಿಹಾರ | ವಿದ್ಯುತ್ ಸೌಕರ್ಯವನ್ನು ಬೆಸ್ಕಾಂರವರಿಂದ ಒದಗಿಸುವಂತೆ ಪ್ರತಿವಾದಿಗೆ ಅಜ್ಞಾಪಕ ನಿರ್ಬಂಧಕಾಜ್ಞೆ ಕೋರಿ |
| *iii* | ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | **18.09.2019** |
| | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ **8** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | **03.02.2020** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | **30.01.2026** |

**<u>ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ರ ಮೇಲಿನ ಆದೇಶ</u>**

ಅರ್ಜಿದಾರರು/ವಾದಿಯು ದಿವಾಣಿ ಪ್ರಕ್ರಿಯ ಸಂಹಿತೆ ಕಲಂ 151 ರಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಿ, ದಾವಾ ಅನುಸೂಚಿತ ಸ್ವತ್ತಿಗೆ ವಿದ್ಯುತ್ ಸೌಕರ್ಯವನ್ನು ಬೆಸ್ಕಾಂರವರಿಂದ ಒದಗಿಸುವಂತೆ ಪ್ರತಿವಾದಿಗೆ ಅಜ್ಞಾಪಕ ನಿರ್ಬಂಧಕಾಜ್ಞೆ ಕೋರಿ ಮಧ್ಯಂತರ ಅರ್ಜಿ ಸಂಖ್ಯೆ-8 ಅನ್ನು ದಾಖಲು ಮಾಡಿರುತ್ತಾರೆ.

**2.** ಸದರಿ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ ವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಸಾಕಷ್ಟು ವರ್ಷಗಳಿಂದ ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಸಲೂನ್ ಕೆಲಸ ನಿರ್ವಹಿಸಿಕೊಂಡು ಬರುತ್ತಿರುತ್ತಾರೆ. ಸದರಿ ಕೆಲಸ ನಿರ್ವಹಿಸಲು ವಿದ್ಯತ್ ಚಕ್ತಿಯ ಅವಶ್ಯಕತೆ ಇರುತ್ತದೆ. ವಾದಿಯ ಕುಟುಂಬ ಅವರ ಈ ಕೆಲಸದಿಂದ ಬರುವ ಆದಾಯದ ಮೇರೆಗೆ ಅವಲಂಬಿತವಾಗಿರುತ್ತದೆ. ಆದರೆ, ಪ್ರತಿವಾದಿಯು, ವಾದಿಯನ್ನು ದಾವಾ ಅನುಸೂಚಿತ ಸ್ವತ್ತಿನಿಂದ ಹೊರಹಾಕಲು,ಕೆಲ ತಿಂಗಳುಗಳ ಹಿಂದೆ ಸಂಪರ್ಕವನ್ನು ತೆಗೆಯಲು ಪ್ರತಿವಾದಿಯು ಎರಡನೇ ಎದುರುದಾರರಿಗೆ ಮೌಖಿಕವಾಗಿ ಆದೇಶಿಸಿರುತ್ತಾರೆ.ವಾದಿಯು ಸಾಕಷ್ಟು ವರ್ಷಗಳಿಂದಲೂ ಸಹ ದಾವಾ ಅನುಸೂಚಿತ ಸ್ವತ್ತಿನ ಕಾನೂನುಬದ್ದ ಸ್ವಾದೀನಾನುಭವದಲ್ಲಿ ಇರುತ್ತಾರೆ. ದಾವಾ ಅನುಸೂಚಿತ ಸ್ವತ್ತಿನಲ್ಲಿ ವಿದ್ಯುತ್ ಚಕ್ತಿಯ ಸಂಪರ್ಕ ಇದ್ದು, ಆ ಬಗ್ಗೆ ಹಣವನ್ನು ಪಾವತಿ ಮಾಡಿಕೊಂಡು ಬಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಸಂಪರ್ಕವನ್ನು ಪಡೆಯಲು ಸಾಕಷ್ಟು ಪ್ರಯತ್ನ ಮಾಡಿದ್ದು, ಅದು ಸಫಲವಾಗಿರುವುದಿಲ್ಲ. ದಾಖಲಾತಿಗಳಂತೆ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಸ್ವಾದೀನಾನುಭವದಲ್ಲಿ ಇರುತ್ತಾರೆ. ಸದರಿ ಸ್ವತ್ತಿನ ವಿದ್ಯುತ್ ಚಕ್ತಿ ಸಂಪರ್ಕವು ಮೂಲಭೂತವಾದ ಅವಶ್ಯಕತೆಯಾಗಿರುತ್ತದೆ. ಪ್ರಸ್ತುತ ಸದರಿ ಅವಶ್ಯಕತೆಗೆ ತಾತ್ಕಲಿಕ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿರುತ್ತದೆ. ಒಂದು ವೇಳೆ ಅರ್ಜಿಯನ್ನು ತಿರಸ್ಕರಿಸಿದ್ದೇ ಆದಲ್ಲಿ, ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎಂಬುದಾಗಿ ತಿಳಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ, ಅರ್ಜಿಯನ್ನು ಪುರಸ್ಕರಿಸಿ ಪ್ರತಿವಾದಿಯು 2ನೇ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿಕೊಂಡಿರುತ್ತಾರೆ. ಒಂದು ವೇಳೆ ಅರ್ಜಿಯನ್ನು ತಿರಸ್ಕರಿಸಿದ್ದೇ ಆದಲ್ಲಿ, ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎಂಬುದಾಗಿ ತಿಳಿಸಿರುತ್ತಾರೆ.

**3.** ಈ ಮೇಲ್ಕಂಡ ಅರ್ಜಿಗೆ ಪ್ರತಿವಾದಿಯು ತನ್ನ ತಕರಾರು ಸಲ್ಲಿಸಿ, ವಾದಿಯು ತನ್ನ ಅರ್ಜಿಯಲ್ಲಿ ತಿಳಿಸಿರುವಂತೆ ಪ್ರತಿವಾದಿ ವಿದ್ಯುತ್ ಇಲಾಖೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ತಿಳಿಸಿರುವುದಿಲ್ಲ, ವಾದಿ ಹಾಗೂ ಅದಕ್ಕೆ ಹೊಂದಿಕೊಂಡಂತೆ ಸುಮಾರು 50 ಅಂಗಡಿ ಮಳಿಗೆಗಳು ನಗರ ಸಭೆಗೆ ಬಾಡಿಗೆಯನ್ನಾಗಲೀ ಅಥವಾ ವಿದ್ಯುತ್ ಶುಲ್ಕವನ್ನಾಗಲಿ ಪಾವತಿಸದೇ ಇದ್ದುದ್ದರಿಂದ ವಿದ್ಯುತ್ ಇಲಾಖೆಯವರಿಗೆ ಸುಮಾರು ರೂ.40,00,000/- ಗಳವರೆಗೆ ವಿದ್ಯುತ್ ಶುಲ್ಕ ಬಾಕಿ ಇರುತ್ತದೆ. ಆದಕಾರಣ, ವಿದ್ಯುತ್ ಇಲಾಖೆಯವರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ. ವಾದಿ ತಾನು ನಡೆಸುತ್ತಿರುವ ಅಂಗಡಿ ಮಳಿಗೆಗೆ ಬಾಡಿಗೆ ಪಾವತಿಸದೇ ವ್ಯಾಪಾರ ಮಾಡುತ್ತಿದ್ದು, ನಗರಸಭೆ ಆಸ್ತಿಯನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ ಹಾಗೂ ಉದ್ದೇಶಪೂರ್ವಕವಾಗಿ ಬಾಡಿಗೆ ಮತ್ತು ವಿದ್ಯುತ್ ಶುಲ್ಕವನ್ನು ಉದ್ದೇಶಪೂರ್ವಕವಾಗಿಯೇ ಸುಮಾರು ವರ್ಷಗಳಿಂದ ಪಾವತಿಸಿರುವುದಿಲ್ಲ. ವಾದಿಯ ಜೊತೆ ಅಂಗಡಿ ನಡೆಸುತ್ತಿದ್ದ ಇಬ್ಬರು ಅಂಗಡಿ ಮಳಿಗೆಗಳನ್ನು ನಡೆಸುತ್ತಿದ್ದು, ಉಳಿದ ಮಳಿಗೆಯವರು ಅಂಗಡಿಗಳನ್ನು ಖಾಲಿ ಮಾಡಿರುತ್ತಾರೆ. ವಾದಿಯರು ನಗರಸಭೆಯ ಸ್ವತ್ತನ್ನು ದುರ್ಬಳಕೆ ಮಾಡಿಕೊಂಡಿರುವ ಕಾರಣ ನಗರ ಸಭೆಯಲ್ಲಿ ವಿದ್ಯುತ್ ಚಕ್ತಿ ಶುಲ್ಕವನ್ನು ಪಾವತಿ ಮಾಡಲು ಹಣ ಇರುವುದಿಲ್ಲ. ಹಣವನ್ನು ಪಾವತಿ ಮಾಡದೇ ಇರುವ ಕಾರಣ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ.ಆದ್ದರಿಂದ, ಅರ್ಜಿಯನ್ನು ತಿರಸ್ಕರಿಸಬೇಕಾಗಿ ಕೋರಿಕೊಂಡಿರುತ್ತಾರೆ.

**4.** ಉಭಯ ಪಕ್ಷಗಾರರ ವಾದಗಳನ್ನು ಆಲಿಸಲಾಯಿತು. ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿಯು ನ್ಯಾಯೋಚಿತ ವಿಲೇಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ

ಅಂಶ 1:- ಅರ್ಜಿದಾರರು/ವಾದಿಯು ಸಲ್ಲಿಸಿರುವ ದಿವಾನಿ ಪ್ರಕ್ರಿಯ ಸಂಹಿತೆ ಕಲಂ 151 ರಡಿಯಲ್ಲಿ ಕೋರಿಕೊಂಡಿರುವಂತೆ ಅಜ್ಞಾಪಕ ನಿರ್ಬಂಧಕಾಜ್ಞೆಯನ್ನು ಆದೇಶಿಸಲು ಮೇಲ್ನೋಟದ ಸಂಗತಿಗಳನ್ನು ವಾದಿಯು ರುಜುವಾತು ಪಡಿಸಿರುವರೇ?

ಅಂಶ 2:- ಯಾವ ಆದೇಶ?

**5.** ಉಭಯಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳ ಅನ್ವಯ ಈ ಮೇಲ್ಕಂಡ ಸಂಗತಿಗಳಿಗೆ ಈ ಕೆಳಕಂಡರೆ ಉತ್ತರಿಸಲಾಗಿದೆ.

ಅಂಶ 1:- ನಕರಾತ್ಮಕವಾಗಿ,

ಅಂಶ 2:- ಈ ಕೆಳಕಂಡ ಆದೇಶದಂತೆ,

## ಕಾರಣಗಳು

**6.ಅಂಶ 1:-** ವಾದಿಯು ದಾವಾ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭವಕ್ಕೆ ದಕ್ಕೆಯನ್ನುಂಟು ಪಡೆಸದಂತೆ ಪ್ರತಿವಾದಿಯ ವಿರುದ್ಧ ದಾವೆಯನ್ನು ದಾಖಲು ಮಾಡಿರುತ್ತಾರೆ. ಅರ್ಜಿದಾರರು ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿ ಬೆಸ್ಕಾಂ ರವರು ದಾವಾ ಅನುಸೂಚಿತ ಸ್ವತ್ತಿಗೆ ವಿದ್ಯುತ್ ಸಂಪರ್ಕ ನೀಡುವಂತೆ ಪ್ರತಿವಾದಿಯು ನಿರ್ದೇಶಿಸುವಂತೆ ಆದೇಶಿಸುವಂತೆ ಕೋರಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

**7.** ಅರ್ಜಿದಾರರು ತಮ್ಮ ಅರ್ಜಿಯಲ್ಲಿ ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಸ್ವಾದೀನಾನುಭವಲ್ಲಿ ಇದ್ದು, ಪ್ರತಿವಾದಿಯ ನಿರ್ದೇಶನದಂತೆ ಎರಡನೇ ಎದುರುದಾರರು ದಾವಾ ಅನುಸೂಚಿತ ಸ್ವತ್ತಿನ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ. ವಾದಿಯು ಪ್ರತಿವಾದಿಯ ಬಾಡಿಗೆದಾರನಾಗಿದ್ದು ಅವರಿಗೆ ಮೂಲಭೂತ ಅವಶ್ಯಕತೆಯನ್ನು ಒದಗಿಸಿಕೊಡುವುದು ಅವಶ್ಯಕವಾಗಿರುತ್ತದೆ. ಹಾಗಾಗಿ ಪ್ರತಿವಾದಿಗೆ ನಿರ್ದೇಶನ ನೀಡುವಂತೆ ಆದೇಶಿಸಬೇಕಾಗಿ ಕೋರಿಕೊಂಡಿರುತ್ತಾರೆ. ಪ್ರತಿವಾದಿಯು ತನ್ನ ತಕರಾರು ಸಲ್ಲಿಸಿ,

ವಾದಿ ಮತ್ತು ಆತನ ಜೊತೆ ಇಬ್ಬರು ಅಂಗಡಿಯವರು ಸ್ವತ್ತಿನ ಬಾಡಿಗೆ ಮತ್ತು ವಿದ್ಯುತ್ ಶುಲ್ಕ ಪಾವತಿಸಿರುವುದಿಲ್ಲ. ಹಾಗಾಗಿ ಒಟ್ಟು ರೂ.40,00,000/- ಶುಲ್ಕ ಬಾಕಿ ಇರುತ್ತದೆ. ಆದಕಾರಣ, ವಿದ್ಯುತ್ ಇಲಾಖೆಯವರು ವಿದ್ಯುತ್ ಕಡಿತಗೊಳಿಸಿರುತ್ತಾರೆ ಹೊರತು ಪ್ರತಿವಾದಿ ತಿಳಿಸಿದ ಮೇರೆಗೆ ವಿದ್ಯುತ್ ಕಡಿತ ಮಾಡಿರುವುದಿಲ್ಲ.ಆದ್ದರಿಂದ ವಾದಿಯ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿಕೊಂಡಿರುತ್ತಾರೆ.

**8.** ನ್ಯಾಯಾಲಯದ ಸಮಕ್ಷಮ ಇರುವ ದಾಖಲೆಯನ್ನು ಪರಿಶೀಲಿಸಿದಾಗ ವಾದಿಯಲ್ಲಿ ದಾವಾ ಅನುಸೂಚಿತ ಸ್ವತ್ತಿನಲ್ಲಿ ಪ್ರತಿವಾದಿಯ ಬಾಡಿಗೆದಾರನಾಗಿರುವುದಾಗಿ ಸದರಿ ಸ್ವತ್ತಿನ ಸ್ವಾಧೀನಾನುಭವಕ್ಕೆ ದಕ್ಕೆಯನ್ನುಂಟು ಪಡಿಸಿರುತ್ತಾರೆ ಎಂಬುದಾಗಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ವಾದಿ ಅರ್ಜಿಯನ್ನು ದಾಖಲು ಮಾಡಿ ಪ್ರತಿವಾದಿಗಳ ನಿರ್ದೇಶನದಂತೆ ದಾವಾ ಅನುಸೂಚಿತ ಸ್ವತ್ತಿನ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ, ವಿದ್ಯುತ್ ಇಲಾಖೆಯವರು ಪ್ರತಿವಾದಿಗಳ ನಿರ್ದೇಶನದಂತೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದಾಗಿ ತಿಳಿಸಿರುತ್ತಾರೆ ಹೊರತು ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವುದಿಲ್ಲ. ಮುಂದುವರೆದು, ಯಾವ ಕಾರಣಕ್ಕಾಗಿ ಪ್ರತಿವಾದಿಯವರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ನಿರ್ದೇಶಿಸಿರುತ್ತಾರೆ ಎಂಬ ಬಗ್ಗೆಯೂ ಸಹ ವಾದಿಯು ನ್ಯಾಯಾಲಯಕ್ಕೆ ಮನದಟ್ಟು ಮಾಡಿರುವುದಿಲ್ಲ.

**9.** ಮುಂದುವರೆದು, ಪ್ರತಿವಾದಿಯು ತಮ್ಮ ತಕರಾರಿನಲ್ಲಿ ವಾದಿಯು ವಿದ್ಯುತ್ ಶುಲ್ಕವನ್ನು ಪ್ರತಿಪಾದಿಸಿರುವುದಿಲ್ಲ. ಸದರಿ ಕಟ್ಟಡದಲ್ಲಿ ಸುಮಾರು 50 ಮಳಿಗೆಗಳು ಇದ್ದು ಅವುಗಳಿಗೆ ಸಂಬಂಧಿಸಿದಂತೆ ರೂ.40,00,000/- ವಿದ್ಯುತ್ ಬಿಲ್ ಬಾಕಿ ಇರುತ್ತದೆ. ಆದ ಕಾರಣ ವಿದ್ಯುತ್ ಇಲಾಖೆಯವರು ಸಂಪರ್ಕವನ್ನು ಕಡಿತಗೊಳಿಸಿರುವುದಾಗಿ ತಿಳಿಸಿರುತ್ತಾರೆ. ವಾದಿಯು ತಾನು ದಾವಾ ಅನುಸೂಚಿತ ಸ್ವತ್ತಿನಲ್ಲಿ ಬಾಡಿಗೆದಾರನಾಗಿರುವುದಾಗಿ ತಿಳಿಸಿರುತ್ತಾರೆ.ಸಾಮಾನ್ಯವಾಗಿ ಯಾವುದೇ ಒಂದು ಸ್ವತ್ತಿನಲ್ಲಿ ಬಾಡಿಗೆದಾರರಾಗಿರುವ ವ್ಯಕ್ತಿಯೇ ಸದರೀ ಸ್ವತ್ತಿನ ವಿದ್ಯುತ್ ಶುಲ್ಕವನ್ನು ಪಾವತಿಸುವ ಬಾಧ್ಯತೆಯನ್ನು ಹೊಂದಿರುತ್ತಾನೆ. ಅದೇ ರೀತಿ, ವಾದಿಯು ಹಾಜರುಪಡಿಸಿರುವ ದಿನಾಂಕ 19.12.2003 ರ ಬಾಡಿಗೆ ಕರಾರಿನಂತೆ ವಾದಿಯೇ ವಿದ್ಯುತ್ ಶುಲ್ಕವನ್ನು ಭರಿಸುವಂತೆ ನಿಬಂಧನೆಗಳು ಕಂಡು ಬಂದಿರುತ್ತದೆ. ಅದರಂತೆ ವಾದಿಯೇ ದಾವಾ ಅನುಸೂಚಿತ ಸ್ವತ್ತಿನ ವಿದ್ಯುತ್ ಶುಲ್ಕವನ್ನು ಪಾವತಿಸುವ ಹೊಣೆಗಾರಿಕೆ ಹೊಂದಿರುತ್ತಾರೆ. ಆದರೆ ವಾದಿಯು ತಾನು ಸಂಪೂರ್ಣ ವಿದ್ಯುತ್ ಶುಲ್ಕವನ್ನು ಭರಿಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಹಾಗಾಗಿ ಪ್ರತಿವಾದಿ ತಿಳಿಸಿದಂತೆ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಸಂಪೂರ್ಣ ವಿದ್ಯುತ್ ಶುಲ್ಕ ಪಾವತಿಸದೇ ಬಾಕಿ ಉಳಿಸಿಕೊಂಡಿರುತ್ತಾರೆ ಎಂಬುದಾಗಿ ಕಂಡುಬಂದಿರುತ್ತದೆ. ವಾದಿಯು ವಿದ್ಯುತ್ ಶುಲ್ಕ ಪಾವತಿಸದೆ ಇರುವ ಕಾರಣವೇ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿರುತ್ತದೆ ಎಂಬುದಾಗಿ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

**10.** ಮುಂದುವರೆದು ಅರ್ಜಿದಾರರು ಸ್ವಲ್ಪ ದಿನಗಳಿಂದ ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಆದರೆ ನಿಖರವಾಗಿ ಯಾವ ದಿನದಂದು, ಅಂದರೆ, ದಾವೆಯನ್ನು ದಾಖಲು ಮಾಡಿದ ನಂತರ ಸಂಪರ್ಕವನ್ನು ಕಡಿತಗೊಳಿಸಲಾಗಿದೆಯೇ ಅಥವಾ ದಾವೆಯನ್ನು ದಾಖಲು ಮಾಡುವ ಮೊದಲೇ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತಾ ಎಂಬ ಬಗ್ಗೆ ಯಾವುದೇ ಸಂಗತಿಗಳನ್ನು ನಿರೂಪಿಸಿರುವುದಿಲ್ಲ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ನಿಖರವಾಗಿ ಯಾವ ದಿನಾಂಕದಂದು ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ ಎಂಬುದನ್ನು ತಿಳಿಸಿರುವುದಿಲ್ಲ. ವಾದಿಯು ವಿದ್ಯುತ್ ಕಡಿತಗೊಳಿಸಿದ ನಂತರ ಪುನಃ ಸಂಪರ್ಕ ಕಲ್ಪಿಸುವಂತೆ ವಿದ್ಯುತ್ ಇಲಾಖೆ ಮತ್ತು ಪ್ರತಿವಾದಿಗೆ ಕೋರಿಕೊಂಡಿದ್ದರು ಎಂಬುದಾಗಿ ತಿಳಿಸಿರುತ್ತಾರೆ. ಆದರೆ ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ಅವರುಗಳು ಯಾವ ಕಾರಣಕ್ಕಾಗಿ ವಾದಿಯ ಪ್ರಾರ್ಥನೆಯನ್ನು ಮನ್ನಿಸಿರುವುದಿಲ್ಲ ಎಂಬುದನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿರುವುದಿಲ್ಲ.

**11.** ಒಟ್ಟಾರೆಯಾಗಿ ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಬಾಡಿಗೆದಾರನಾಗಿದ್ದು ವಿದ್ಯುತ್ ಶುಲ್ಕವನ್ನು ಸಂಪೂರ್ಣವಾಗಿ ಪಾವತಿಸಿದ ನಂತರವೂ ಸಹ ವಿದ್ಯುತ್ ಇಲಾಖೆಯವರು ಸಂಪರ್ಕ ಕಡಿತಗೊಳಿಸಿರುತ್ತಾರೆ, ಎಂಬುದಾಗಿ ಕಂಡು ಬಂದಿರುವುದಿಲ್ಲ. ಆ ರೀತಿ ವಿದ್ಯುತ್ ಶುಲ್ಕ ಬಾಕಿ ಇದ್ದಲ್ಲಿ ಮತ್ತೊಮ್ಮೆ ವಿದ್ಯುತ್ ಸಂಪರ್ಕವನ್ನು ನೀಡುವಂತೆ ಆದೇಶಿಸಲು ಕಾನೂನಿನ ಅಡಿಯಲ್ಲಿ ಆಸ್ಪದವಿರುವುದಿಲ್ಲ ಹಾಗೂ ಈ ಹಂತದಲ್ಲಿ ಪ್ರತಿವಾದಿಯ ನಿರ್ದೇಶನದಂತೆ ವಿದ್ಯುತ್ ಸಂಪರ್ಕವನ್ನು ತೆಗೆದು ಹಾಕಲಾಗಿದೆ ಎಂಬುದು ಸಹ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ. ಆದಕಾರಣ ಪ್ರತಿವಾದಿಯರು ವಿದ್ಯುತ್ ಇಲಾಖೆಗೆ ವಿದ್ಯುತ್ ಸಂಪರ್ಕ ನೀಡುವಂತೆ ಆದೇಶಿಸಲು ಮೇಲ್ನೋಟದ ಸಂಗತಿಗಳು ರುಜುವಾತುಪಡಿಸಲು ವಿಫಲವಾಗಿರುತ್ತಾರೆ. ಆದ್ದರಿಂದ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**12. ಅಂಶ 2:-** ಆದ್ದರಿಂದ ಈ ಕೆಳಕಂಡ ಮಾಡುವ ಆದೇಶವೇನೆಂದರೆ,

## -:ಆದೇಶ:-

ಅರ್ಜಿದಾರರು/ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ದಿವಾನಿ ಪ್ರಕ್ರಿಯಾ ಸಂಹಿತೆ ಕಲಂ 151 ರಡಿಯಲ್ಲಿನ ಅರ್ಜಿಯನ್ನು ರೂ. 500/- ಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.

**(ಈ ಆದೇಶವನ್ನು ಶೀಘ್ರಲಿಪಿಗಾರಗಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 30.01.2026 ರಂದು ಘೋಷಿಸಲಾಯಿತು.)**

**(ಕಾವ್ಯಶ್ರೀ.ಎಂ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು)**

**- : ಆದೇಶ : -**

ಅರ್ಜಿದಾರರು/ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ದಿವಾನಿ ಪ್ರಕ್ರಿಯಾ ಸಂಹಿತೆ ಕಲಂ 151 ರಡಿಯಲ್ಲಿನ ಅರ್ಜಿಯನ್ನು ರೂ. 500/- ಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.

**(ಕಾವ್ಯಶ್ರೀ.ಎಂ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.